**ಓ.ಎಸ್ ನಂ. 86/2018** **ಪಿ.ಡಬ್ಲ್ಯೂ-3**

**<u>ಸಾಕ್ಷಿಯನ್ನು ದಿನಾಂಕ 28.3.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಪಾಟೀ ಸವಾಲುಃ ಪ್ರತಿವಾದಿ 1 ರಿಂದ 3 ಮತ್ತು 7 ರವರ ಪರ ಶ್ರೀ ಬಿ.ಎಲ್.ಟಿ ವಕೀಲರಿಂದಃ</u>

ನಾನು 2006 ರಲ್ಲಿ 4 ನೇ ಪ್ರತಿವಾದಿಯ ಮನೆಯ ಮುಂದೆ ಗಲಾಟೆ ಆಗಿರುವ ವಿಚಾರದ ಬಗ್ಗೆ ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ನುಡಿದಿರುತ್ತೇನೆ. ನನಗೆ ವಾದಿಯ ಪರಿಚಯ ಇರುವುದಿಲ್ಲ, 1 ನೇ ಪ್ರತಿವಾದಿ, 2 ನೇ ಪ್ರತಿವಾದಿ ಹಾಗೂ 5 ನೇ ಪ್ರತಿವಾದಿಯ ಪರಿಚಯ ಇರುತ್ತದೆ. 5 ನೇ ಪ್ರತಿವಾದಿಯು ನಾನು ಕೆಲಸ ಮಾಡುತ್ತಿದ್ದಾಗ ಅವರು ಮೆಡಿಕಲ್ ಶಾಪ್ ಇಟ್ಟುಕೊಂಡಿದ್ದರಿಂದ ಪರಿಚಯವಾಗಿರುತ್ತಾರೆ. 5 ನೇ ಪ್ರತಿವಾದಿಯು ಶಾಪ್ ನಲ್ಲಿ ಇಲ್ಲದೇ ಇದ್ದಾಗ ನಾನು ಮತ್ತು ಮಹದೇವಪ್ಪ ಶಾಪ್ ನಲ್ಲಿ ಔಷಧಿ ಮಾರಾಟ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನಾನು ಕೆಲಸ ಇಲ್ಲದ ವೇಳೆಯಲ್ಲಿ 5 ನೇ ಪ್ರತಿವಾದಿಯು ಶಾಪ್ ನಲ್ಲಿ ಇರುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹೆಚ್. ಡಿ. ಕೋಟೆ ಯಲ್ಲಿ ತಯಾರಿಸಿರುತ್ತಾರೆ ಆದರೆ ಅದನ್ನು ಯಾರು ಹೇಳಿ ಬರೆಸಿ ಎಲ್ಲಿ ಟೈಪ್ ಮಾಡಿಸಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. 5 ನೇ ಪ್ರತಿವಾದಿಯು ವಾದಿಗೆ ಬರೆದು ಕೊಟ್ಟಿರುವ ಕ್ರಯದ ಪತ್ರಕ್ಕೆ ನಾನು ಸಹಿ ಮಾಡಿರುವುದಿಲ್ಲ. ಸದರಿ ಕ್ರಯಪತ್ರದ ವ್ಯವಹಾರದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು, ಮಹದೇವಪ್ಪ ಮತ್ತು 5 ನೇ ಪ್ರತಿವಾದಿ ತುಂಬಾ ಸ್ನೇಹಿತರು ಎಂದರೆ ಸರಿ. 5 ನೇ ಪ್ರತಿವಾದಿಯು ಯಾವ ಪತ್ರ ವ್ಯವಹಾರ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಮನೆ ನಂ. ಮತ್ತು ಚೆಕ್ಕು ಬಂದಿ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಅಕ್ರಮ ಪ್ರವೇಶ ಮಾಡಿದ್ದಾರೆ ಎಂದು ಹೇಳುವ ಸಮಯದಲ್ಲಿ ದಾವಾ ಆಸ್ತಿಯಲ್ಲಿ 1 ನೇ ಪ್ರತಿವಾದಿ ವಾಸ ಆಗಿದ್ದರು. ಕಾನ್ ಸಿಂಗ್ ಅವರು ಬಟ್ಟೆ ವ್ಯವಹಾರ ಮಾಡುತ್ತಿದ್ದರು. ಅವರ ಮನೆಯ ಬಗ್ಗೆ ಮತ್ತು ದಾವಾ ಆಸ್ತಿಯ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಾನು 5 ನೇ ಪ್ರತಿವಾದಿ ಮತ್ತು ಮಹದೇವಪ್ಪ ಸ್ನೇಹಿತರಾಗಿರುವುದನ್ನು ವಾದಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.